# ಕೂಗುತಿದೆ ಪಕ್ಷಿ

## ಪದಗಳ ಅರ್ಥ – Word Meaning

**ಅಳಲು** – ನೋವು, ದುಃಖ

**ಇಂಚರ** – ಇಂಪಾದ ದನಿ, ಮಧುರ ದನಿ

**ಋಣ** - ಸಾಲ, ಹಂಗು

**ಚೆಲ್ಲಾಟ** - ವಿನೋದ, ವಿಲ್ಲಾಸ

**ತಂಪೆರೆ** - ತೃಪ್ತಿ ನೀಡು

**ನಡುಗಡ್ಡೆ** – ನೀರ ನಡುವಿರುವ ಚಿಕ್ಕ ಪ್ರದೇಶ

**ನೀರುಣಿಸು** - ನೀರುಹಾಕು

**ಪ್ರತೀತಿ** - ಪ್ರಸಿದ್ಧಿ, ಜನಜನಿತ

**ಬಣ್ಣಗೆಡು** - ಕಳಾಹೀನನಾಗು

**ಮನೋಹರ** - ಮನಸ್ಸಿಗೆ ಹಿತವಾದ

**ಮಿರುಗು** - ಹೊಳೆಯುವುದು

**ಮೈದಳೆ** - ಆಕಾರಹೊಂದು

**ಸೊರಗು** - ಬಾಡು, ಕ್ಷೀಣವಾಗು

**ತಾಣ** - ನೆಲೆ, ಜಾಗ

**ಸತ್ಕಾರ್ಯ** - ಒಳ್ಳೆಯ ಕೆಲಸ

**ಅಭಿಮಾನ** – ಹೆಮ್ಮೆ

**ಉಲ್ಲಾಸ** – ಆನಂದ, ಲವಲವಿಕೆ

**ಕಂಗೊಳಿಸು** - ಕಣ್ಣಿಗೆ ಅಂದವಾಗಿ ಕಾಣು

**ಜೀವತಳೆ** - ಜೀವಪಡೆ, ಜೀವಹೊಂದು

**ತೂರಾಟ** - ಮೇಲಕ್ಕೆ ಚಿಮ್ಮುವ ಆಟ

**ನಯನ** – ಕಣ್ಣು, ನೇತ್ರ

**ನೊರೆ** - ಬುರುಗು

**ಪ್ರವಾಸಿ ತಾಣ** – ಪ್ರವಾಸಿಗರು ಬರುವ ಜಾಗ

**ಬೋಳುಮರ** – ಎಲೆಗಳು ಸಂಪೂರ್ಣವಾಗಿ - ಉದುರಿಹೋಗಿರುವ ಮರ

**ಮಿನ ಮಿನ** - ಥಳ ಥಳ

**ಮೆಲುಗಾಳಿ** - ಮೆಲ್ಲಗೆ ಬೀಸುವ ಗಾಳಿ

**ರಾರಾಜಿಸು** - ಪ್ರಕಾಶಿಸು, ಶೋಭಿಸು

**ಸವರು** - ಹಚ್ಚು, ಲೇಪಿಸು

**ಸುಳಿ** - ನದಿಯಲ್ಲಿ ನೀರು ವೃತ್ತಾಕಾರವಾಗಿ ಸುತ್ತುವ ರೀತಿ

**ಹಸಿರೇ ಉಸಿರು** - ನಾಣ್ಣುಡಿ, ಮರಗಿಡಗಳನ್ನು ಬೆಳೆಸಬೇಕು. ಅವು ಜೀವನಾಧಾರ, ಅವುಗಳಿಂದ ಜೀವ ಜಗತ್ತಿನ ಆಮ್ಲಜನಕ ದೊರೆಯುತ್ತದೆ.

FOR KANNADA

## ಪ್ರಶ್ನೆಗಳು

### ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. (answer the following in one sentence)

೧. ನಾರದ ಗಡ್ಡೆ ಎಲ್ಲಿದೆ?

ಉ: ನಾರದ ಗಡ್ಡೆ ರಾಯಚೂರಿನ ಸಮೀಪ, ಕೃಷ್ಣಾನದಿಯಲ್ಲಿ ಇದೆ.

೨. ಪಕ್ಷಿ ಕೂಗುತ್ತಿದ್ದ ಬೋಳುಮರ ಯಾವ ರೀತಿ ಇತ್ತು?

ಉ: ಪಕ್ಷಿ ಕೂಗುತ್ತಿದ್ದ ಬೋಳುಮರ ಎಲೆಗಳಿಲ್ಲದೆ, ಹೂವುಗಳಿಲ್ಲದೆ, ಹಣ್ಣುಕಾಯಿಗಳಿಲ್ಲದೆ ಒಣಗಿತ್ತು.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

೩. ಮಕ್ಕಳು ಮಾಡಿದ ಸತ್ಕಾರ್ಯವನ್ನು ಪಕ್ಷಿಗಳು ಹೇಗೆ ಮೆಚ್ಚಿಕೊಂಡವು?

ಉ: ಮಕ್ಕಳು ಮಾಡಿದ ಸತ್ಕಾರ್ಯವನ್ನು ಪಕ್ಷಿಗಳು ಮೆಚ್ಚಿ ಹಾಡಿದವು.

೪. ಮಕ್ಕಳ ಮನಸ್ಸಿಗೆ ಉಲ್ಲಾಸ ತಂದ ಸಂಗತಿ ಯಾವುದು?

ಉ: ಮರದ ಸೊಬಗು ಮಕ್ಕಳ ಮನಸ್ಸಿಗೆ ಉಲ್ಲಾಸ ತಂದಿತು.

೫. ಪಕ್ಷಿಯ ಮಾತುಗಳಿಗೆ ಬಷೀರ್ ಏನೆಂದು ಪ್ರತಿಕ್ರಿಯಿಸಿದನು?

ಉ: ಪಕ್ಷಿಗೆ ಮರದ ಮೇಲೆ ಇರುವ ಅಭಿಮಾನ ಮತ್ತು ಭಾವುಕತೆ ನೋಡಿ ಬಷೀರ್ ಅಚ್ಚರಿಯಿಂದ ಪ್ರತಿಕ್ರಿಯಿಸಿದನು.

೬. ಪಕ್ಷಿಯ ಮಾತುಗಳನ್ನು ಕೇಳಿದ ದಿವ್ಯ ಯಾವ ತೀರ್ಮಾನಕ್ಕೆ ಬಂದಳು?

ಉ: ಪಕ್ಷಿಯ ಮಾತುಗಳನ್ನು ಕೇಳಿದ ದಿವ್ಯ ಸೂಕ್ತ ಚಿಕಿತ್ಸೆ ಕೊಡಿಸುವ ತೀರ್ಮಾನಕ್ಕೆ ಬಂದಳು.

೭. ಬೋಳುಮರ ಮೊದಲಿನಂತೆ ಹೇಗೆ ಜೀವ ತಳೆಯಿತು?

ಉ: ಬೋಳುಮರ ಎಲೆ, ಹಣ್ಣು, ಹೂವುಗಳಿಂದ ಮೊದಲಿನಂತೆ ಜೀವ ತಳೆಯಿತು.

೮. ಪಕ್ಷಿಗಳು ಯಾವುದನ್ನು ಮೆಚ್ಚಿ ಹಾಡು ಹಾಡಿದವು?

ಉ: ಪಕ್ಷಿಗಳು ಮಕ್ಕಳು ಮಾಡಿದ ಸತ್ಕಾರ್ಯವನ್ನು ನೋಡಿ ಮೆಚ್ಚಿ ಹಾಡು ಹಾಡಿದವು.

೯. ಮಕ್ಕಳ ಸತ್ಕಾರ್ಯಕ್ಕೆ ಮರ ಹೇಗೆ ಋಣ ತೀರಿಸಿತು?

ಉ: ಮಕ್ಕಳ ಸತ್ಕಾರ್ಯಕ್ಕೆ ಮರವು ಎಲೆಗಳನ್ನು ಅಲುಗಾಡಿಸಿ ಸಂಗೀತ ಹಾಡಿ ಋಣ ತೀರಿಸಿತು.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

**ಆ) ಕೆಳಗಿನ ಪ್ರಶ್ನೆಗಳಿಗೆ ಎರಡು - ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. ((answer the following in two-three sentence)**

೧. ಕೃಷ್ಣ ನದಿಯ ಓಟ ಯಾವ ರೀತಿ ನಯನ ಮನೋಹರವಾಗಿದೆ?

ಉ: ಕೃಷ್ಣ ನದಿ ಮೈದುಂಬಿ ಹರಿಯುತ್ತಾಳೆ. ಕೃಷ್ಣ ನದಿಯ ಭೋರ್ಗರೆತ, ತೂರಾಟ, ಚೆಲ್ಲಾಟ, ಹರಿಯುವ ಓಟದ ರೀತಿ ನಯನ ಮನೋಹರವಾಗಿದೆ.

೨. ನಾರದಗಡ್ಡೆಯ ವಿಶೇಷತೆಗಳೇನು?

ಉ: ನಾರದಗಡ್ಡೆಯಲ್ಲಿ ನಾರದ ಮುನಿ ತಪಸ್ಸು ಮಾಡಿದ್ದರೆಂಬ ಪ್ರತೀತಿ ಇದೆ. ಇಲ್ಲಿ ಶಿವನ ದೇವಾಲಯ ಇದೆ. ಇವು ನಾರದಗಡ್ಡೆಯ ವಿಶೇಷತೆಗಳು.

೩. ಗಣೇಶನು ಪಕ್ಷಿಯನ್ನು ಏನೆಂದು ಪ್ರಶ್ನಿಸಿದನು?

ಉ: “ಏ ಸುಂದರ ಪಕ್ಷಿಯೇ ಎಲ್ಲರೂ ಸಂತೋಷದಿಂದ ಇದ್ದಾರೆ, ನೀನೇಕೆ

ನೋವಿನಿಂದ ಕೂಗುತ್ತಿದ್ದೀಯಾ? ಏನದು ನಿನ್ನ ಅಳಲು?" ಎಂದು ಗಣೇಶನು ಪಕ್ಷಿಯನ್ನು ಪ್ರಶ್ನಿಸಿದನು.

೪. ಬೋಳಾಗುವುದಕ್ಕೆ ಮೊದಲು ಮರದ ಸೊಬಗು ಹೇಗಿತ್ತೆಂದು ಪಕ್ಷಿ ವಿವರಿಸಿತು?

ಉ: ಬೋಳಾಗುವುದಕ್ಕೆ ಮೊದಲು ಮರದಲ್ಲಿ ಹಸಿರೆಲೆಗಳು ಇದ್ದವು. ಟೊಂಗೆ, ಟೊಂಗೆಗೂ ಸಾವಿರಾರು ಹೂ, ಹಣ್ಣುಗಳು ಇದ್ದವು ಎಂದು ಪಕ್ಷಿ ವಿವರಿಸಿತು.

೫. ಪಕ್ಷಿಗೆ ಮರದ ಮೇಲೆ ಪ್ರೀತಿ ಬೆಳೆಯಲು ಕಾರಣವೇನು?

ಉ:ಪಕ್ಷಿಯ ಅಜ್ಜ-ಅಜ್ಜಿ, ಅಪ್ಪ-ಅಮ್ಮ, ಅಣ್ಣ-ತಮ್ಮ, ಅಕ್ಕ-ತಂಗಿ ಎಲ್ಲರೂ ಮರದಲ್ಲಿ ಹುಟ್ಟಿ ಬೆಳೆದರು. ಅದಕ್ಕೆ ಪಕ್ಷಿಗೆ ಮರದ ಮೇಲೆ ಪ್ರೀತಿ ಬೆಳೆಯಲು ಕಾರಣ.

೬. ಸಸ್ಯ ವೈದ್ಯರು ಮರವನ್ನು ಹೇಗೆ ಉಪಚರಿಸಿದರು?

ಉ: ಸಸ್ಯ ವೈದ್ಯರು ಮರವನ್ನು ನೋಡಿ, ಟೊಂಗೆಯನ್ನು ಗಮನಿಸಿದರು. ಏನೇನೊ ವಿಚಾರ ಮಾಡಿ ಬೇರುಗಳಿಗೆ ಚುಚ್ಚುಮದ್ದು ನೀಡಿದರು. ಒಣಗಿದ ಭಾಗಕ್ಕೆ ಔಷಧಿ ಸವರಿದರು.

**ಇ) ಈ ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು? ತಿಳಿಸಿರಿ. (Who told whom)**

೧. "ನೀನೇಕೆ ನೋವಿನಿಂದ ಕೂಗುತ್ತಿದ್ದೀಯಾ?"

ಉ: ಈ ಮಾತನ್ನು, ಗಣೇಶನು ಪಕ್ಷಿಯನ್ನು ಕೇಳಿದನು.

೨. "ಈ ಮರದ ಮೇಲೆ ಅಷ್ಟೊಂದು ಪ್ರೀತಿಯೇ?"

ಉ: ಈ ಮಾತನ್ನು, ಲತಾ ಪಕ್ಷಿಯನ್ನು ಕೇಳಿದಳು.

೩. "ನಾನೂ ಇಲ್ಲಿಯೇ ಜನ್ಮ ತಳೆದೆ".

ಉ: ಈ ಮಾತನ್ನು, ಪಕ್ಷಿಯು ಮಕ್ಕಳಿಗೆ ಹೇಳಿತು.

FOR KANNADA ಕನ್ನಡಕ್ಕಾಗಿ ಇಲ್ಲಿ ಬನ್ನಿ

### ಈ) ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ. (Fill in the blanks)

೧. ನಾರದ ಗಡ್ಡೆಯು ಕೃಷ್ಣಾ ನದಿಯಲ್ಲಿದೆ.

೨. ಹಕ್ಕಿಗಳ ಕಲರವ ಕಿವಿಗೆ ಇಂಪಾಗಿತ್ತು.

೩. ಮರವು ನೂರಾರು ಪಕ್ಷಿಗಳಿಗೆ ಆಶ್ರಯತಾಣ ಆಗಿತ್ತು.

೪. ಹಸಿರೇ ಉಸಿರು ಎಂದು ಎಲ್ಲೆಡೆ ಸಾರೋಣ.

## ಭಾಷಾಭ್ಯಾಸ

### ೧) ಈ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿರಿ. (Make your own sentences)

**ಇಂಚರ**: ಮನೆಯ ಸುತ್ತ ಹಕ್ಕಿಗಳ ಇಂಚರ ಸಂಗೀತಮಯ.

**ಕಂಗೊಳಿಸು**: ಕಾಡು ಹಚ್ಚಹಸಿರಿನಿಂದ ಕಂಗೊಳಿಸುತ್ತಿತ್ತು.

**ಬಣ್ಣಗೆಡು:** ತುಂಬಾ ಬಿಸಿಲಿನಿಂದ ಹಸಿರೆಲೆಗಳು ಬಣ್ಣಗೆಟ್ಟಿತು.

**ಪ್ರವಾಸ:** ನಾವು ಮೈಸೂರು ಪ್ರವಾಸಕ್ಕೆ ಹೊರಟಿದ್ದೇವೆ.

**ಉಲ್ಲಾಸ:** ಶಾಲೆಯಲ್ಲಿ ನಾವೆಲ್ಲ ಉಲ್ಲಾಸದಿಂದ ಇರುತ್ತೇವೆ.

**ಕನಿಕರ:** ರಸ್ತೆಯ ಬದಿ ನಾಯಿಮರಿ ನೋಡಿ ಕನಿಕರ ಉಂಟಾಯಿತು.

**ಸತ್ಕಾರ್ಯ:** ನಾವು ಯಾವಾಗಲೂ ಸತ್ಕಾರ್ಯವನ್ನು ಮಾಡಬೇಕು.

### ೨) ವಿರುದ್ಧಾರ್ಥಕ ಪದಗಳನ್ನು ಬರೆಯಿರಿ. (Write the opposite words)

ಸುಂದರ x ಅಸುಂದರ

ಮೆಲ್ಲಗೆ x ಬೇಗನೆ

ಬುಡ x ತುದಿ

ಅರ್ಥ x ಅನರ್ಥ

ಅಭಿಮಾನ x ದುರಭಿಮಾನ

ಸಂತೋಷ x ಅಸಂತೋಷ

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ